# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 218 (344) |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 06-12-2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ ವಿವರ | ಉತ್ತರ |
|---|---|---|
| (ಅ) | ಸಕಾಲದಲ್ಲಿ ಪೋಡಿ ಮಾಡಲು ನಿಗದಿಪಡಿಸಿರುವ ಗರಿಷ್ಟ ಅವಧಿ ಎಷ್ಟು? ನಿಗದಿಪಡಿಸಿರುವ ಅವಧಿ ಮೀರಿದ್ದರೂ ಪೋಡಿ ಯಾಗದ ಪ್ರಕರಣಗಳೆಷ್ಟು? (ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವಿವರ ನೀಡುವುದು) | ಸರ್ಕಾರದ ಅಧಿಸೂಚನೆ ಸಂ.ಕಂಇ 2 ಎಸ್‌ಎಸ್‌ಎಂ 2020 ದಿನಾಂಕ:23-11-2020 ರನ್ವಯ ತತ್ಕಾಲ್ ಪೋಡಿ ಕೋರಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥ ಪಡಿಸಲು ಕಾಲಮಿತಿ ನಿಗಧಿಪಡಿಸಲಾಗಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿದೆ.<br><br>ಅದರಂತೆ ಪ್ರಸ್ತುತ ಬೆಂಗಳೂರು ನಗರ ಜಿಲ್ಲೆಯಲ್ಲಿ 546 ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 299 ತತ್ಕಾಲ್ ಪೋಡಿ ಪ್ರಕರಣಗಳು ಭೂಮಾಪನ ಶಾಖೆಯಲ್ಲಿ ಬಾಕಿ ಇರುತ್ತವೆ. ಸರ್ಕಾರದಿಂದ ಭೂಮಂಜೂರಾತಿಯಾದ ಜಮೀನುಗಳ ಕುರಿತು ಸಕಾಲದಲ್ಲಿ ಪೋಡಿ ದುರಸ್ತಿ ಕುರಿತು ಯಾವುದೇ ಕಾಲಮಿತಿ ನಿಗಧಿ ಪಡಿಸಿರುವುದಿಲ್ಲ.<br><br>ಪ್ರಸ್ತುತ ಬೆಂಗಳೂರು ನಗರ ಜಿಲ್ಲೆಯಲ್ಲಿ 123 ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 195 ದರಖಾಸ್ತು ಪೋಡಿ ಪ್ರಕರಣಗಳು ಭೂಮಾಪನ ಶಾಖೆಯಲ್ಲಿ ಬಾಕಿ ಇರುತ್ತವೆ. |
| (ಆ) | ಸರ್ಕಾರದಿಂದ ಭೂಮಂಜೂರಾತಿಯಾದ ಭೂಮಿಯ ಪೋಡಿ ಮಾಡಲು ಅನಗತ್ಯ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಸಕಾಲದಲ್ಲಿ ಪೋಡಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ಬಂದಿದೆ.<br><br>**ಸಕಾಲದಲ್ಲಿ ಧರಖಾಸ್ತು ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು**<br><br>1. ಕೆಲವು ತುರ್ತು ಮತ್ತು ವಿಶೇಷ ಸಂದರ್ಭಗಳಲ್ಲಿ ನಿಯಮಾನುಸಾರ ನಮೂನೆ 1 ರಿಂದ 5 ಭರ್ತಿ ಮಾಡಿ, ಧೃಡೀಕರಿಸಿ, ಕೇವಲ ಅರ್ಜಿದಾರರ ಮಂಜೂರಿಯ ನೈಜತೆಯನ್ನು ಪರಿಶೀಲಿಸಿ, ಏಕವ್ಯಕ್ತಿಗೆ ಪೋಡಿ ಮಾಡಲು ಆದೇಶಿಸುವ ಅಧಿಕಾರವನ್ನು ಸುತ್ತೋಲೆ ಸಂಖ್ಯೆ **ಕಂಇ 8 ಎಲ್‌ಜಿಪಿ 2016 ದಿನಾಂಕ:20-06-2016 ಹಾಗೂ ತಿದ್ದುಪಡಿ ಸಂಖ್ಯೆ: ಕಂಇ 8 ಎಲ್‌ಜಿಪಿ 2016 (ಭಾಗ-1) ದಿನಾಂಕ: 18-07-2016** ರನ್ವಯ ಸಂಬಂಧಿಸಿದ ತಹಶೀಲ್ದಾರರಿಗೆ ಪ್ರತ್ಯಾಯೋಜಿಸಿ ಆದೇಶಿಸಿದೆ.<br>2. ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗೈರು ವಿಲೇ ಕಡತ ಪುನರ್ ನಿರ್ಮಾಣದ ಸಮಿತಿಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲುಸರ್ಕಾರದ |

| | | |
|---|---|---|
| | | ಸುತ್ತೋಲೆ **ಸಂಖ್ಯೆ.ಆರ್.ಡಿ.74. ಎಲ್‌ಜಿಪಿ 2009 ದಿಃ 17.9.2009** ಮತ್ತು **ಕಂಇ 8 ಎಲ್‌ಜಿಪಿ 2016 ದಿ:20.6.2016 & ದಿ:18-7-2016** ರಡಿ ಸೂಚಿಸಲಾಗಿದೆ.<br>3. ಮಾನ್ಯ ನ್ಯಾಯಾಲಯದಿಂದ ಆದೇಶವಾಗಿದ್ದು ಮೂಲ ಮಂಜೂರಿ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಮಂಜೂರಿ ಜಮೀನಿನ ಪಹಣಿ / ಮ್ಯುಟೇಷನ್ ವಿಸ್ತೀರ್ಣ ಮತ್ತು ಅನುಭವ ಆದರಿಸಿ ನಿಯಾನುಸಾರ ಪೋಡಿ ಕ್ರಮ ಕೈಗೊಳ್ಳುವಂತೆ ಸುತ್ತೋಲೆ ಸಂಖ್ಯೆ **.ಕಂಇ 08 ಎಲ್.ಜಿಪಿ 2016 ದಿ:20.6.2016** ರಲ್ಲಿ ಸೂಚನೆ ನೀಡಲಾಗಿದೆ.<br>4. ಕಂದಾಯ ಇಲಾಖೆಯಿಂದ ಸರ್ಕಾರಿ ಜಮೀನುಗಳ ಪಹಣಿ ಒಟ್ಟಿಗೂಡಿಸಿ ತಿದ್ದುಪಡಿ ಮಾಡುವ ಬಗ್ಗೆ ಕಂದಾಯ ಅದಾಲತ್. ಗಳನ್ನು ನಡೆಸಲಾಗುತ್ತಿದೆ<br>5. ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಸರ್ಕಾರದಿಂದ ಸೂಚಿಸಿದ್ದು, ಅದರಂತೆ ಕಂದಾಯ ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ.<br>6. ಪಹಣಿಯಲ್ಲಿನ ಮಾಲಿಕರ ಹೆಸರು/ಪೌತಿ ಖಾತೆ., ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂದ ಕಂದಾಯ ಇಲಾಖೆ ಯಿಂದ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ<br>7. ನಮೂನೆ 1 ರಿಂದ 5 ಗಳನ್ನು ಡಿಜಿಟೈಸ್ಡ್ ಮಾಡಿ ನೇರವಾಗಿ ಮೋಜಿಣಿ ತಂತ್ರಾಂಶ ಮುಖಾಂತ ಅಳತೆ ಮಾಡಿ ನಮೂನೆ 6 ರಿಂದ 10 ಗಳನ್ನು ತಯಾರಿಸುವುದನ್ನು ಅಂದೋನಲ ರೂಪ ದಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>8. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>9. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣ ಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಇದರಿಂದ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ |
| (ಇ) | ಭೂಮಂಜೂರಾತಿಯಾದ ಭೂಮಿಯ ಪೋಡಿ ಗಾಗಿ ಇರುವ ಮಾರ್ಗಸೂಚಿಯನ್ನು ನೀಡುವುದು | ಸಂಬಂಧಿಸಿದ ಸರ್ಕಾರಿ ಸರ್ವೆ ನಂಬರಿನಲ್ಲಿ ಇದುವರೆಗೆ ಆಗಿರುವ ಎಲ್ಲಾ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿಕೊಂಡು ಮಂಜೂರಿಯ ನೈಜತೆ ಬಗ್ಗೆ ಖಾತರಿಪಡಿಸಿಕೊಂಡು ಇಲಾಖೆ ಸುತ್ತೋಲೆ **ಸಂ,ತಾಂತ್ರಿಕ.ದರಖಾಸ್ತು.ಪೋಡಿ.ಆಂದೋಲನ.40/ 2008-09 ದಿನಾಂಕಃ 20-10-2008** ರನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರುಗಳು ದೃಢೀಕರಿಸಿ ಅಳತೆ ಕುರಿತು ಮೂಲ |

| | | |
|---|---|---|
| | | ಕಡತವನ್ನು ಭೂಮಾಪನ ಶಾಖೆಗೆ ಕಳುಹಿಸಿದ ನಂತರ ಭೂಮಾಪನ ಶಾಖೆಯಲ್ಲಿ ಅಳತೆ ಮಾಡಿ ಇಲಾಖೆ ಸುತ್ತೋಲೆ **ಸಂ,ತಾಂತ್ರಿಕ.ಆಡಳಿತ.ಸುತ್ತೋಲೆ.29/ 2009-10 ದಿನಾಂಕಃ-25-1-2010** ರನ್ವಯ ನಮೂನೆ 6 ರಿಂದ 10 ನ್ನು ಭರ್ತಿ ಮಾಡಿ ಅಳತೆಯಾದ ಪ್ರಕರಣಗಳಲ್ಲಿ ಮಂಜೂರಾತಿ ಮತ್ತು ಅನುಭವ ಸಾಮ್ಯವಿರುವ ಎಲ್ಲಾ ಪ್ರಕರಣಗಳಿಗೆ, ಮಂಜೂರಾದ ವಿಸ್ತೀರ್ಣ ಮತ್ತು ಮಂಜೂರಾತಿ ವಿಸ್ತೀರ್ಣಕ್ಕಿಂತ ಸ್ವಾಧೀನ/ಅನುಭವದ ವಿಸ್ತೀರ್ಣ ಕಡಿಮೆಯಿರುವ ಪ್ರಕರಣಗಳಲ್ಲಿ ಒಪ್ಪಿಗೆ ಮೇರೆಗೆ ಏಕಕಾಲದಲ್ಲಿ ಕ್ರಮ ಕೈಗೊಂಡು, ಹೊಸ ನಂಬರು ನೀಡಿ ಪ್ರತ್ಯೇಕ ಪಹಣಿ ಸೃಜಿಸಲು ಸೂಚಿಸಲಾಗಿದೆ.<br><br>ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ಮಾಡುವಲ್ಲಿ ವಿಳಂಬವಾಗಬಹುದೆಂದು ಸರ್ಕಾರವು, ಕೆಲವು ತುರ್ತು ಮತ್ತು ವಿಶೇಷ ಸಂದರ್ಭಗಳಲ್ಲಿ ಪ್ರಕರಣದಲ್ಲಿ ಅರ್ಜಿದಾರರಿಗೆ ಆಗಿರುವ ಭೂ ಮಂಜೂರಿಯು ನೈಜತೆಯಿಂದ ಕೂಡಿರುವ ಬಗ್ಗೆ ಖಾತರಿ ಪಡಿಸಿಕೊಂಡು, ನಮೂನೆ 1 ರಿಂದ 5 ಭರ್ತಿ ಮಾಡಿ ಧೃಡೀಕರಿಸಿ ಏಕವ್ಯಕ್ತಿಗೆ ಪೋಡಿ ಮಾಡಲು ಆದೇಶಿಸಲು ಸುತ್ತೋಲೆ ಸಂ.**ಕಂಇ 8 ಎಲ್‌ಜಿಪಿ 2016 ದಿನಾಂಕ: 20-06-2016 ಹಾಗೂ ತಿದ್ದುಪಡಿ ಕಂಇ 8 ಎಲ್‌ಜಿಪಿ 2016(ಭಾಗ-1) ದಿನಾಂಕ :18-07-2016** ರನ್ವಯ ಅಧಿಕಾರ ಪ್ರತ್ಯಾಯೋಜಿಸಿಲಾಗಿದ್ದು ಅದರಂತೆ ಕಾರ್ಯ ನಿರ್ವಹಿಸಲಾಗುತ್ತಿದೆ. |
| (ಈ) | ಪೋಡಿಗಾಗಿ ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು ಅಭಿಲೇಖಾಲಯದಲ್ಲಿ ಲಭ್ಯವಿದ್ದು, ಅಧಿಕಾರಿಗಳು ಸ್ವತ: ದೃಡೀಕರಿಸಿ ಕೊಂಡು ಪೋಡಿ ಮಾಡಲು ಅವಕಾಶವಿದ್ದ ಲ್ಲಿ ರೈತರು / ಸಾರ್ವಜನಿಕರಿಗೆ ಅಭಿಲೇಖಾಲಯದಿಂದ ದಾಖಲೆಗಳನ್ನು ಪಡೆದು ಸಲ್ಲಿಸಿ ಎಂದು ತಿಳಿಸುವ ಅವಶ್ಯಕತೆ ಇದೆಯೇ, ಸದರಿ ದಾಖಲೆಗಳನ್ನು ಪೋಡಿ ಮಾಡುವ ಅಧಿಕಾರಿಗಳೇ ಪಡೆದು ಪೋಡಿ ಮಾಡಲು ಸರ್ಕಾರ ಆದೇಶಿಸಿದೆಯೇ, ಆದೇಶಿಸಿದ್ದಲ್ಲಿ ಆದೇಶದ ಪ್ರತಿ ನೀಡುವುದು. | ಮಂಜೂರಿ ಜಮೀನುಗಳ ಪೋಡಿ ಕೋರಿ ಅರ್ಜಿಯೊಂದಿಗೆ ಅರ್ಜಿದಾರರು ಯಾವುದೇ ಮಂಜೂರಿ ದಾಖಲೆಗಳನ್ನು ಸಲ್ಲಿಸಬೇಕಾಗಿರುವುದಿಲ್ಲ.<br><br>ಸಂಬಂಧಿಸಿದ ಸರ್ಕಾರಿ ಸರ್ವೆ ನಂಬರಿನಲ್ಲಿ ಇದುವರೆಗೆ ಆಗಿರುವ ಎಲ್ಲಾ ಮಂಜೂರಿ ಕುರಿತು ಕಛೇರಿಯಲ್ಲಿಯ ಮೂಲ ದಾಖಲೆಗಳನ್ನು ಪರಿಶೀಲಿಸಿಕೊಂಡು ಮಂಜೂರಿಯ ನೈಜತೆಯ ಬಗ್ಗೆ ಖಾತರಿ ಪಡಿಸಿಕೊಂಡು ಇಲಾಖೆ ಸುತ್ತೋಲೆ ಸುತ್ತೋಲೆ **ಸಂ,ತಾಂತ್ರಿಕ.ದರಖಾಸ್ತು.ಪೋಡಿ.ಆಂದೋಲನ.40/2008-09 ದಿ 20-10-2008**ರನ್ವಯ ಕಛೇರಿಯಲ್ಲಿಯ ಮಂಜೂರಾತಿ ಸಂಬಂದಿಸಿದಂತೆ 1) ಭೂಮಂಜೂರಾತಿ ವಹಿ 2) ಭೂಮಂಜೂರಾ ತಿ ನಡವಳಿ ವಹಿ 3) ಸಾಗುವಳಿ ಚಿಟಿ ವಿತರಣಾ ವಹಿ ಇತ್ಯಾದಿ ವಹಿ ಗಳನ್ನು ಪರಿಶೀಲಿಸಿಕೊಂಡು ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ತಹಶೀಲ್ದಾರರು, ಉಪ ವಿಭಾಗಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರುಗಳು ದೃಢೀಕರಿಸಿ ಅಳತೆ ಕುರಿತು ಮೂಲ ಕಡತವನ್ನು ಭೂಮಾಪನ ಶಾಖೆಗೆ ಕಳುಹಿಸಲು ಸೂಚನೆ ನಿಡಲಾಗಿದೆ.<br><br>ಅದರಂತೆ ನಿಯಮಾನುಸಾರ ಅಳತೆಗಾಗಿ ಕಡತ ಭೂಮಾಪನ ಶಾಖೆಗೆ ಸ್ವೀಕೃತವಾದ ನಂತರ ಅಳತೆ ಮಾಡಿ ಸುತ್ತೋಲೆ ಅನ್ವಯ ನಮೂನೆ 6 ರಿಂದ 10 ಅನ್ನು ಭರ್ತಿ |

| | | |
|---|---|---|
| | | ಮಾಡಿ ಅಳತೆಯಾದ ಪ್ರಕರಣಗಳಲ್ಲಿ ಮಂಜೂರಾತಿ ಮತ್ತು ಅನುಭವ ವಿಸ್ತೀರ್ಣ ಸಾಮ್ಯವಿರುವ ಪ್ರಕರಣಗಳಿಗೆ, ಮಂಜೂರಾದ ವಿಸ್ತೀರ್ಣ ಮತ್ತು ಮಂಜೂರಾತಿ ವಿಸ್ತೀರ್ಣಕ್ಕಿಂತ ಸ್ವಾಧೀನ/ಅನುಭವದ ವಿಸ್ತೀರ್ಣ ಕಡಿಮೆ ಇರುವ ಪ್ರಕರಣಗಳಲ್ಲಿ ಒಪ್ಪಿಗೆ ಮೇರೆಗೆ ಏಕಕಾಲದಲ್ಲಿ ಕ್ರಮ ಕೈಗೊಂಡು ಹೊಸ ನಂಬರು ನೀಡಿ ಪ್ರತ್ಯೇಕ ಪಹಣಿ ಸೃಜಿಸಲು ಸೂಚಿಸಲಾಗುತ್ತಿದೆ. |

**ಸಂಖ್ಯೆ: ಕಂಇ 188 ಎಸ್‌ಎಸ್‌ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು